


7
ನೆನ್ನೆ ಸೂರ್ಯ ಮುಳುಗ್ದ ಪಶ್ಚಿಮದಲ್ಲಿ.
ಈವತ್ತು ಬೆಳಿಗ್ಗೆ ಪೂರ್ವದಲ್ಲಿ.
ಪೂರ್ವ ಪಶ್ಚಿಮ
ಉತ್ತರ ದಕ್ಷಿಣ
ಬರೆದೇ ಇರಲಿಲ್ಲ, ಸೂರ್ಯನ
ಪ್ರೈಮರಿ ಶಾಲೇಲಿ!



5
ರಾತ್ರಿಯಾಯಿತು
ನಾವು ಸ್ವಿಚ್ ಆನ್ ಮಾಡುತ್ತೇವೆ.
ಬೆಳಗಾಯಿತು
ನಾವು ಸ್ವಿಚ್ ಆಫ್ ಮಾಡುತ್ತೇವೆ.

6
ಬಾಗಿಲ ಮುಂದೆ ಬೀಗಣ್ಣ
ಗಂಟೆ ಹಾಗೆ ತೂಗಣ್ಣ
ಕಳ್ಳರು ಬೀಗ ಮುರಿದ್ರೆ ಅಂತ
ಕೀ ಅಲ್ಲೇ ಬಿಟ್ ಹೋಗಣ್ಣ!



8
ಬರ್ತಾ ಬರ್ತಾ ರಾಯರ ಕುದುರೆ
ಆಯ್ತು ಕತ್ತೆ!
ಹೋಗ್ತಾ ಹೋಗ್ತಾ ರಾಯರ ಕತ್ತೆ
ಆಯ್ತು ಕುದುರೆ!

ಕತ್ತೆ ಬೆನ್ನಿಗೆ
ಕುದುರೆ ಬೆನ್ನಿಗೆ
ಹೊರೋದಂತು ತಪ್ಲಿಲ್ಲ.